ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ
ನವನಗರ, ಹಳೇ ಪು.ಬೆಂ. ರಸ್ತೆ, ಹುಬ್ಬಳ್ಳಿ - 580 025

HUBLI ELECTRICITY SUPPLY COMPANY LIMITED
[Wholly owned Govt. of Karnataka undertaking]
Company Office,
Navanagar, Old P.B.Road, Hubballi-580025
E-mail ID: gmadmhr.hescom@gmail.com

Corporate Identity Number[CIN]: U31401KA2002SGC030437

ಕ್ರಮ ಸಂಖ್ಯೆ:ಹುವಿಸಕಂನಿ/ಪ್ರವ್ಯ/ಲೆ[ಸಿ]/ಸಲೆ[ಸಿ]/ಹಿಸ[ಸಿ]/ವಿವಿ-04/531/20-21, 9/5-1907. ದಿನಾಂಕ: 2 SEP 2020

## ಸುತ್ತೋಲೆ

ವಿಷಯ: ಇಲಾಖಾ ವಿಚಾರಣೆಗಳನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತವಾಗಿ ಇತ್ಯರ್ಥಪಡಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು ರವರ ದಿನಾಂಕ: 15.04.2019 ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 75 ಸೇಇವಿ 2018.
2. ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು ರವರ ದಿನಾಂಕ: 21.01.2019 ರ ಸುತ್ತೋಲೆ ಸಂಖ್ಯೆ: ಸಿಆಸುಇ 76 ಸೇಇವಿ 2018.
3. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು ದಿನಾಂಕ:28.08.2020 ರಂದು ಟಿಪ್ಪಣಿ ಅನುಮೋದಿಸಿದಂತೆ.

******

ಹುವಿಸಕಂನಿಯ ಅಧಿಕಾರಿ/ನೌಕರರ ವಿರುದ್ಧ ಮಾಡಲಾದ ಆರೋಪವು ರುಜುವಾತಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ವಾಸ್ತವಾಂಶ ಕಂಡುಕೊಳ್ಳಲು ಅನುವಾಗುವಂತೆ ಕವಿಮಂ ನೌಕರರ[ವ.ಶಿ.ನಿ. ಮತ್ತು ಮೇ] ನಿಯಮಗಳು, 1987ರಲ್ಲಿ ನಿಯಮಗಳನ್ನು ರೂಪಿಸಿದೆ. ಆದರೆ ಸಂಬಂಧಿಸಿದ ಶಿಸ್ತು ಪ್ರಾಧಿಕಾರಿಗಳು ಹಲವಾರು ಪ್ರಕರಣಗಳಲ್ಲಿ ಉಲ್ಲೇಖ(1) ಮತ್ತು (2)ರ ಸೂಚನೆಗಳನ್ನು ಪಾಲಿಸದೇ ಇರುವ ಪರಿಣಾಮವಾಗಿ, ಶಿಸ್ತು ಕ್ರಮದ ನಡವಳಿಗಳನ್ನು ಪೂರ್ಣಗೊಳಿಸಲು ಅನಗತ್ಯವಾಗಿ ವಿಳಂಬವಾಗುತ್ತಿರುವುದು ಮತ್ತು ಇದರಿಂದ ನಿವೃತ್ತಿ/ಪದೋನ್ನತಿ ಅಂಚಿನಲ್ಲಿರುವ ಅಧಿಕಾರಿ/ನೌಕರರಿಗೆ ತೀವ್ರವಾದ ಅನಾನುಕೂಲತೆಗಳು ಉಂಟಾಗುತ್ತಿರುವುದು ಹಾಗೂ ಪ್ರಕರಣದ ಇಲಾಖಾ ವಿಚಾರಣೆಯ ವಿಳಂಭದಿಂದಾಗಿ ಸೂಕ್ತ ಸಾಕ್ಷಾಧಾರಗಳ ಅಲಭ್ಯತೆ ಉಂಟಾಗುತ್ತಿರುವುದಲ್ಲದೇ ವಿಳಂಭವಾಗುತ್ತಿರುವುದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ., ರವರ ಗಮನಕ್ಕೆ ಬಂದಿದ್ದು, ಈ ಕುರಿತಂತೆ ಮಾನ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ, ಸದರಿ ಇಲಾಖಾ ವಿಚಾರಣೆಗಳ ವಿಳಂಭವನ್ನು ತಡೆಗಟ್ಟಲು ಈ ಕೆಳಕಂಡ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸುವಂತೆ, ನಿರ್ದೇಶಿತನಾಗಿದ್ದೇನೆ.

1. ಕನಿಷ್ಠ 15 ದಿನಗಳಿಗೊಮ್ಮೆ ಕಡ್ಡಾಯವಾಗಿ ತಮ್ಮ ವ್ಯಾಪ್ತಿಯಲ್ಲಿರುವ ಇಲಾಖಾ ವಿಚಾರಣೆಗಳ ವಿಚಾರಣೆ ನಡೆಸಲು ತ್ವರಿತ ಕ್ರಮ ಕೈಗೊಳ್ಳುವುದು.
2. ಕವಿಮಂ ನೌಕರರ[ವ.ಶಿ.ನಿ. ಮತ್ತು ಮೇ] ನಿಯಮಗಳು, 1987ರಡಿಯಲ್ಲಿ ನಿರ್ದಿಷ್ಟಪಡಿಸಲಾದ ಶಿಸ್ತು ಪ್ರಾಧಿಕಾರಿಗಳು ಸದರಿ ನಿಯಮಗಳ ನಿಯಮ-10 ಮತ್ತು 11ನೇ ನಿಯಮಗಳ ಅವಕಾಶಗಳನ್ನು ಉಪಯೋಗಿಸಿಕೊಂಡು ನಿಯಮ-12ರಡಿ ಲಘು ದಂಡನೆಗಳನ್ನು ವಿಧಿಸುವಂತಹ ಪ್ರಕರಣಗಳನ್ನು ಕಂಪನಿ ಕಾರ್ಯಾಲಯದೊಂದಿಗೆ ಅನಗತ್ಯ ಪತ್ರ ವ್ಯವಹಾರ ಮಾಡುವುದನ್ನು ತಪ್ಪಿಸಿ ಅವರ ಮಟ್ಟದಲ್ಲಿಯೇ ಶಿಸ್ತು ನಡವಳಿಗಳನ್ನು ತ್ವರಿತವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು. ನಿಯಮ-11 ರಡಿ ಬರುವಂತಹ ಕಠಿಣ ದಂಡನೆ ವಿಧಿಸಬೇಕಾದ ಪ್ರಕರಣಗಳಲ್ಲಿ ಮಾತ್ರ ಅಂತಹ ದಂಡನೆಗಳನ್ನು ವಿಧಿಸಲು ಅಧಿಕಾರ ಹೊಂದಿದ ಶಿಸ್ತು ಪ್ರಾಧಿಕಾರಕ್ಕೆ ಉಲ್ಲೇಖ(2)ರಲ್ಲಿ ತಿಳಿಸಿರುವಂತೆ ಇಲಾಖಾ ವಿಚಾರಣೆಯ ದಾಖಲೆಗಳನ್ನು ಕಳುಹಿಸತಕ್ಕದ್ದು.
3. ಅನಧಿಕೃತವಾಗಿ ಗೈರುಹಾಜರಾದ ಅಧಿಕಾರಿ/ನೌಕರರ ಪ್ರಕರಣಗಳಲ್ಲಿ ಕಾಲ ವಿಳಂಭ ಮಾಡದೇ ನಿಯಮಾನುಸಾರ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು.

C:\Users\acer\Desktop\1519 - Circular.docx | ಪು.ತಿ.ನೋ.

4. ದೋಷಾರೋಪಣಾ ಪಟ್ಟಿಯನ್ನು ಹೊರಡಿಸಿ, ಆರೋಪಿತ ಅಧಿಕಾರಿ/ನೌಕರರ ರಕ್ಷಣಾ ಹೇಳಿಕೆಯನ್ನು ಪಡೆದ ನಂತರ ವಿಚಾರಣೆ ನಡೆಸಬೇಕೆಂದು ಶಿಸ್ತುಪ್ರಾಧಿಕಾರ ನಿರ್ಧರಿಸಿದಲ್ಲಿ, ಒಂದು ತಿಂಗಳೊಳಗಾಗಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ಏಕಕಾಲಕ್ಕೆ ನೇಮಿಸಿ ಆದೇಶಿಸತಕ್ಕದ್ದು.
5. ಸಾಧ್ಯವಾದಷ್ಟು ಮಟ್ಟಿಗೆ ಆರೋಪಿತ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಇರುವ ಸ್ಥಳದಲ್ಲೇ/ಕೇಂದ್ರಸ್ಥಾನದಲ್ಲಿಯೇ ಇರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ಸೇವೆಯಲ್ಲಿರುವ ಹುವಿಸಕಂನಿ ಅಧಿಕಾರಿಗಳನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡುವುದು.
6. ವಿಚಾರಣಾಧಿಕಾರಿಯು ಪ್ರಕರಣಗಳನ್ನು ನಿಗದಿಪಡಿಸಿದ ಕಾಲಮಿತಿಯೊಳಗೆ ವಿಚಾರಣೆಯನ್ನು ಪೂರ್ಣಗೊಳಿಸುವುದು.
7. ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ದಾಖಲೆಗಳನ್ನು ಹೊಂದಿರುವ ಅಧಿಕಾರಿಗಳಿಗೆ ಕಾಲಮಿತಿಯನ್ನು ನಿಗದಿಪಡಿಸತಕ್ಕದ್ದು ಮತ್ತು ಆ ದಾಖಲೆಗಳನ್ನು ನಿಗದಿತ ಕಾಲಮಿತಿಯೊಳಗೆ ಒದಗಿಸಲು ವಿಫಲರಾದವರು ವಿಳಂಭಕ್ಕೆ ಹೊಣೆಗಾರರಾಗುತ್ತಾರೆಂದು ಸೂಚಿಸತಕ್ಕದ್ದು.
8. ವಿಚಾರಣಾಧಿಕಾರಿಯು ಸಾಧ್ಯವಾದಷ್ಟು ಮಟ್ಟಿಗೆ, ವಿಚಾರಣೆಯನ್ನು ದಿನನಿತ್ಯ ನಡೆಸುವುದು. ಆಪಾದಿತ ನೌಕರರಿಗೆ ಹಾಗೂ ಎಲ್ಲಾ ಸಾಕ್ಷಿದಾರರಿಗೆ ಹಾಜರಾಗಲು ಸೂಚಿಸತಕ್ಕದ್ದು ಹಾಗೂ ಅವರನ್ನು ಏಕಕಾಲದಲ್ಲಿ ಪ್ರತ್ಯೇಕ ತಂಡಗಳಲ್ಲಿ ವಿಚಾರಣೆ ನಡೆಸತಕ್ಕದ್ದು, ಆದರೆ, ಸಾಕ್ಷಿದಾರರು ಹಾಜರಾಗಲು ಒಂದಕ್ಕಿಂತ ಹೆಚ್ಚು ಬಾರಿ ವಿಚಾರಣೆಯನ್ನು ಮುಂದೂಡತಕ್ಕದ್ದಲ್ಲ.
9. ವಿಚಾರಣಾಧಿಕಾರಿಯು ವಿಚಾರಣೆಗೆ ಹಾಜರಾಗುವಂತೆ ಸಾಕ್ಷಿದಾರರಿಗೆ ಆಜ್ಞೆಯನ್ನು ಹೊರಡಿಸಿದಾಗ, ಸಾಕ್ಷಿದಾರರು ಅದನ್ನು ಪಾಲಿಸದೇ ಇದ್ದಲ್ಲಿ, THE KARNATAKA DEPARTMENTAL INQUIRIES(ENFORCEMENT OF ATTENDANCES OF WITNESSES AND PRODUCTION OF DOCUMENTS AND MISCELLANEOUS PROVISIONS) ACT, 1981ರಡಿ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು, ಕಂಪನಿ/ನಿಗಮದ ಸೇವೆಯಲ್ಲಿರುವ ಹಾಗೂ ಅಧಿಕೃತ ಸಾಕ್ಷಿ ಎಂದು ಹೆಸರಿಸಲ್ಪಟ್ಟ ಅಧಿಕಾರಿ/ನೌಕರರು ಆರೋಪಿತ ಅಧಿಕಾರಿ/ನೌಕರ ತನಗಿಂತ ಕಿರಿಯ ಅಥವಾ ಹಿರಿಯ ಎನ್ನುವುದನ್ನು ಪರಿಗಣಿಸದೇ, ವಿಚಾರಣಾಧಿಕಾರಿಯ ಮುಂದೆ ಹಾಜರಾಗಿ ಸಾಕ್ಷ್ಯ ನೀಡತಕ್ಕದ್ದು, ಸಾಕ್ಷ್ಯ ನೀಡಲು ಹಾಜರಾಗದಿದ್ದರೆ ಅಂತಹ ಅಧಿಕಾರಿ/ನೌಕರರ ವಿರುದ್ಧ ಸಂಬಂಧಪಟ್ಟ ಶಿಸ್ತು ಪ್ರಾಧಿಕಾರ ಶಿಸ್ತು ಕ್ರಮ ತೆಗೆದುಕೊಳ್ಳತಕ್ಕದ್ದು.

ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ. ಸಂ.ಅ]

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:

1. ಮುಖ್ಯ ಆರ್ಥಿಕ ಅಧಿಕಾರಿ, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
2. ಆರ್ಥಿಕ ಸಲಹೆಗಾರರು[ಆಂ.ಪ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
3. ಎಲ್ಲಾ ಮುಖ್ಯ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಲಯಗಳು, ಹುವಿಸಕಂನಿ.,
4. ಪ್ರಧಾನ ವ್ಯವಸ್ಥಾಪಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
5. ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತಗಳು, ಹುವಿಸಕಂನಿ.,
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗಗಳು, ಹುವಿಸಕಂನಿ.,
7. ಹಿರಿಯ ಆಪ್ತ ಕಾರ್ಯದರ್ಶಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಂಪನಿ ಕಾರ್ಯಾಲಯ, ಹುವಿಸಕಂನಿ., ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮೇಲ್ಕಂಡ ವಿಷಯವನ್ನು ಮಾನ್ಯರವರ ದಯಾಪರ ಅವಗಾಹನೆಗೆ ತರಲು ಕೋರಿದೆ.